# ಎಚ್.ಎಸ್.ಶಿವಪ್ರಕಾಶ್ ಅವರ ಆಯ್ದ ಕವಿತೆಗಳಲ್ಲಿನ ಐತಿಹಾಸಿಕ ಪ್ರಜ್ಞೆ

**ಡಾ. ಪ್ರೇಮ್‌ಕುಮಾರ್ ಕೆ**
ಕನ್ನಡ ಸಹಾಯಕ ಪ್ರಾಧ್ಯಾಪಕ
ಕ್ರಿಸ್ತು ಜಯಂತಿ ಕಾಲೇಜು, ಸ್ವಾಯತ್ತ,
ಕೆ.ನಾರಾಯಣಪುರ, ಕೊತ್ತನೂರು ಅಂಚೆ,
ಬೆಂಗಳೂರು–560077
premkumara.k@kristujayanti.com

ಎಚ್.ಎಸ್.ಶಿವಪ್ರಕಾಶ್ ಅವರು ನಾಟಕಕಾರರಾಗಿ, ಕವಿಯಾಗಿ ಹೊಸಗನ್ನಡ ಸಾಹಿತ್ಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದವರಾಗಿದ್ದಾರೆ. ಹುಲಕುಂಟೆಮಠ ಶಿವಮೂರ್ತಿ ಶಾಸ್ತ್ರಿ ಶಿವಪ್ರಕಾಶ್ ಅವರು ಕನ್ನಡದಲ್ಲಿ ಸಣ್ಣಕತೆ, ನಾಟಕ, ಕಾದಂಬರಿ, ಪ್ರಬಂಧ, ಕಾವ್ಯ, ವಿಮರ್ಶೆ, ಅನುವಾದ ಹೀಗೆ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಹೊಸಗನ್ನಡದ ವಿವಿಧ ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಕನ್ನಡ ಸಾಹಿತ್ಯದ ಓದುಗಾಸಕ್ತರನ್ನು ತಮ್ಮತ್ತ ಅಯಸ್ಕಾಂತದಂತೆ ಸೆಳೆದಿದ್ದಾರೆ. ಇಂಗ್ಲಿಷ್ ಹಾಗೂ ಕನ್ನಡ ಸಾಹಿತ್ಯಗಳ ಗಾಢವಾದ ಮತ್ತು ಶ್ರದ್ಧಾನಿಷ್ಠವಾದ ಅಧ್ಯಯನದಿಂದ ಕಾವ್ಯ ವ್ಯವಸಾಯದಲ್ಲಿ ಹಲವು ಸೂಕ್ಷ್ಮತೆಗಳನ್ನು, ಜೀವನದ ನಾನಾ ಮುಖಗಳನ್ನು, ಬದುಕಿನ ಕೋಮಲ ಅನುಭವಗಳನ್ನು ತಮ್ಮದೇ ಆದ ವಿಶಿಷ್ಟ ದೃಷ್ಟಿಕೋನಗಳಿಂದ ಚಿಂತಿಸಿ, ತಮ್ಮ ಶಕ್ತಿಯುತ ಲೇಖನಿಯಿಂದ ಕಾವ್ಯರೂಪದಲ್ಲಿ ಅನನ್ಯಗೊಳಿಸಿದ್ದಾರೆ. ಪುರಾಣ, ಚರಿತ್ರೆ, ಜಾನಪದ, ಸಾಮಾಜಿಕ, ಧಾರ್ಮಿಕ ಹೀಗೆ ಯಾವುದೇ ನೆಲೆಯ ಸೂಕ್ಷ್ಮಾಭಿವ್ಯಕ್ತಿಯ ವಸ್ತುಗಳನ್ನು ಆಯ್ದುಕೊಂಡು ಅದನ್ನು ತಮ್ಮ ಭಾವಾಂತರಂಗದ ಮೂಲಕ ಕಾವ್ಯಮಯಗೊಳಿಸುವ ಕಲೆ ಎಚ್.ಎಸ್.ಶಿವಪ್ರಕಾಶರವರಿಗೆ ಸಿದ್ಧಿಸಿದೆ. ಹಾಗೆಯೇ ತಾವು ಸೃಷ್ಟಿಸಿರುವ ಕಾವ್ಯಜಗತ್ತಿನೊಳಗೆ ಓದುಗರನ್ನು ತನ್ಮಯರನ್ನಾಗಿಸುವ ಶಕ್ತಿಯನ್ನು ತಮ್ಮ ಕವನಗಳಿಗೆ ಇವರು ನೀಡಿರುತ್ತಾರೆ. ಆ ಕವನಗಳು ಓದುಗನ ಎಲ್ಲಾ ವಿಶಿಷ್ಟ ಸಂವೇದನೆಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡಿವೆಯೋ ಎನ್ನುವಂತೆ ಓದುಗದೊರೆಗಳನ್ನು ಮಂತ್ರಮುಗ್ಧರನ್ನಾಗಿಸುತ್ತವೆ.

"ಎಚ್.ಎಸ್.ಶಿವಪ್ರಕಾಶ್ ರವರು ಕನ್ನಡ ಸಂಸ್ಕೃತಿಯ ಸತ್ವಗಳನ್ನು ಕೃತಿ ರಚನೆಯಲ್ಲಿ ಒಳಗು ಮಾಡಿದ್ದಾರೆ. ಇವರು ಯುವ ಕವಿಗಳ ಕ್ರಿಯಾಶೀಲತೆಯ ಸೂಕ್ಷ್ಮ ಸ್ವರೂಪವನ್ನು ಬಯಲಿಗೆ ತಂದಿರುವರು. ಕವಿತೆಯ ಬೇರೆಬೇರೆ ರೂಪಗಳ ಬಗೆಗೆ, ಅರ್ಥಪೂರ್ಣ ಸೂಕ್ಷ್ಮತೆಗಳ ಬಗೆಗೆ ಏಕತಾನತೆ ನಿರ್ಮಿತಿಯ ಎದುರಿಗೆ ಅನೇಕ ಮಿತಿಗಳ

ಮೂಲಕವೂ ಎಚ್ಚರವನ್ನು ತೋರುವ ಇವರ ಕವಿತೆಗಳು ಸೂಕ್ಷ್ಮಮನಸ್ಸಿನ ಓದುಗ ವಲಯವನ್ನು ನಿರ್ಮಿಸಿಕೊಂಡಿವೆ" ಎಂದು ಮಿಲರೇಪ ಕವನಸಂಕಲನದ ಮುನ್ನುಡಿಯಲ್ಲಿ ಬರೆದಿರುವ ಕಿ.ರಂ.ನಾಗರಾಜರ ಮಾತುಗಳು ಶಿವಪ್ರಕಾಶರ ಕಾವ್ಯದ ಕುರಿತ ಅದ್ಭುತ ನೋಟವೊಂದನ್ನು ತೆರೆದಿಡುತ್ತದೆ. ಇಂದಿನ ಯುವ ಪ್ರತಿಭೆಗಳಿಗೆ ಎಚ್.ಎಸ್.ಶಿವಪ್ರಕಾಶರ ಕವಿತೆಗಳು ಹೊಸ ಮನ್ವಂತರವನ್ನು ಸೃಷ್ಟಿಸಿದೆ ಎಂದರೆ ಅದು ತಪ್ಪಾಗಲಾರದು. ಶಿವಪ್ರಕಾಶ್ ಅವರು ಹೊಗಳಿಕೆಗೋ, ಕೀರ್ತಿ, ಸನ್ಮಾನಗಳಿಗೋ ಸೋತು ಕಾವ್ಯವನ್ನು ಬರೆದವರಲ್ಲ. ಬದಲಿಗೆ ಇವರು ಸಾಮಾಜಿಕ ತಲ್ಲಣಗಳನ್ನು, ವರ್ತಮಾನದ ವಾಸ್ತವಗಳನ್ನು, ಇತಿಹಾಸದ ಗತವೈಭವಗಳನ್ನು ಕುರಿತ ಸತ್ಯದ ಅರಿವನ್ನು ನಿರೂಪಿಸುವುದಕ್ಕಾಗಿ ಬರೆದ ಕವಿಯಾಗಿದ್ದಾರೆ. ಅವರೇ ಹೇಳುವಂತೆ ಕವಿ ಒಂದು ಕಾವ್ಯವನ್ನು ಒಬ್ಬ ಓದಗನಿಗೋಸ್ಕರ ಬರೆಯೋದಲ್ಲ, ಎಲ್ಲಾ ಓದುಗರಿಗಾಗಿ ಬರೀಬೇಕು" ಎನ್ನುವ ಕಾವ್ಯ ಕಟ್ಟುವ ಕಲೆಯ ಕುರಿತಾದ ಮಾತುಗಳು ಕಾವ್ಯದ ಅಂತಸ್ಸತ್ವ ಎಂತಹುವುದು ಎನ್ನುವುದನ್ನು ತೋರ್ಪಡಿಸುತ್ತದೆ. ಹೀಗೆ ಎಚ್.ಎಸ್.ಶಿವಪ್ರಕಾಶರು ಒಂದು ಪಂಥದ ಓದುಗರಿಗಷ್ಟೇ ತಮ್ಮ ಕಾವ್ಯಗಳನ್ನು ಸೀಮಿತಗೊಳಿಸದೇ ಎಲ್ಲಾ ಬಗೆಯ ಓದುಗರಿಗೂ ಮೆಚ್ಚಿಕೆಯಾಗುವಂತಹ ಕಾವ್ಯರಾಶಿಯನ್ನು ಕನ್ನಡ ಸಾಹಿತ್ಯ ಲೋಕಕ್ಕೆ ಕೊಡುಗೆಯನ್ನಾಗಿ ನೀಡಿದ್ದಾರೆ. ಎಚ್.ಎಸ್.ಶಿವಪ್ರಕಾಶರು ರಚಿಸಿರುವ ಕವನ ಸಂಕಲನಗಳೆಂದರೆ ಮಿಲರೇಪ(೧೯೭೭). ಮಳೆಬಿದ್ದ ನೆಲದಲ್ಲಿ (೧೯೮೩), ಅಣುಕ್ಷಣ ಚರಿತೆ (೧೯೯೦), ಸೂರ್ಯಜಲ (೧೯೯೩), ನವಿಲು ನಾಗರ, ಮಳೇಯೇ ಮಂಟಪ ಹೀಗೆ ಅನೇಕ ಕವನ ಸಂಕಲನಗಳನ್ನು ರಚಿಸಿ ಹೊಸಗನ್ನಡ ಸಾಹಿತ್ಯಕ್ಕೊಂದು ನವೀನ ದೃಷ್ಟಿಕೋನವೊಂದನ್ನು ಒದಗಿಸಿದವರಾಗಿದ್ದಾರೆ. ಇವರು ಕವನಸಂಕಲನಗಳು ಜಾಗತಿಕ ತಲ್ಲಣಗಳು, ವಾಸ್ತವ ಸಂಗತಿಗಳ ಕಡೆಗೆ ಹೆಚ್ಚಿನ ಮುಖ ಮಾಡಿದ್ದರೂ ಇವರ ಕವಿತೆಗಳಲ್ಲಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ನೆಲೆಯ ಅಭಿವ್ಯಕ್ತಿಗಳು ಹಾಸುಹೊಕ್ಕಾಗಿವೆ. ಪ್ರಸ್ತುತ ಲೇಖನದಲ್ಲಿ ಎಚ್.ಎಸ್.ಶಿವಪ್ರಕಾಶರ ಕವಿತೆಗಳಲ್ಲಿ ಮೂಡಿಬಂದಿರುವ ಐತಿಹಾಸಿಕ ನೆಲೆಯ ವಿಚಾರಗಳನ್ನು ಚರ್ಚಿಸುವ ಪ್ರಯತ್ನವೊಂದನ್ನು ಮಾಡಲಾಗಿದೆ.

ಚರಿತ್ರೆಗಳು ಒಂದು ಸಮಾಜದ ವಾಸ್ತವತೆಯನ್ನು ತಿಳಿಸುವ ಮೂಕ ಸಾಕ್ಷಿಗಳಿದ್ದಂತೆ. ನಮ್ಮ ಅಂದಿನ ಗತವೈಭವಗಳು ಇಂದು ಪಾಳುಬಿದ್ದ ಸ್ಥಳಗಳು, ಪ್ರವಾಸಿ ತಾಣಗಳಾಗಿ ಮಾರ್ಪಟ್ಟಿವೆ. ಇಂದಿನ ಯುವಕರಿಗೆ ಐತಿಹಾಸಿಕ ಪ್ರಜ್ಞೆಯೇ ಇಲ್ಲದೇ ಕೇವಲ ಲಾಭಾಂಶವನ್ನು ನೀಡುವ ಓದನ್ನು ಆರಿಸಿಕೊಳ್ಳುತ್ತಿದ್ದಾರೆ. ಒಂದು ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿರುವ ಯುವವರ್ಗ ಆ ಪರಂಪರೆಯ ಇತಿಹಾಸವನ್ನೇ ಅರಿಯದೇ ಹೋದಾಗ ಐತಿಹಾಸಿಕ, ಸಾಂಸ್ಕೃತಿಕ ಪುನರಜ್ಜೀವನವೆನ್ನುವುದು ಹಾಸ್ಯಾಸ್ಪದವಾಗಿಬಿಡುತ್ತದೆ. ಹಾಗಾಗಿ

ಚರಿತ್ರೆಯನ್ನು ಎಂದಿಗೂ ನಾಶ ಮಾಡಬಾರದು, ಅದನ್ನು ಉಳಿಸಿ ಬೆಳೆಸಬೇಕು, ಪ್ರತಿಯೊಬ್ಬನಿಗೂ ಅವನ ದೇಶಕ್ಕೆ ಸಂಬಂಧಿಸಿದ ಐತಿಹಾಸಿಕ ಪ್ರಜ್ಞೆಯೊಂದು ಇರಬೇಕಾಗುತ್ತದೆ ಎನ್ನುವುದನ್ನು ಎಚ್.ಎಸ್.ಶಿವಪ್ರಕಾಶರು ತಮ್ಮ ಕವನಗಳಲ್ಲಿ ಬಿಂಬಿಸುತ್ತಾರೆ.

ಎಚ್.ಎಸ್.ಶಿವಪ್ರಕಾಶರ ಮೊದಲ ಕವನಸಂಕಲನವಾದ 'ಮಿಲರೇಪ' ಕವನ ಸಂಕಲನದಲ್ಲಿನ 'ಜಂಗಮರು' ಕವಿತೆ ಕರ್ನಾಟಕದ ಗತ ಇತಿಹಾಸದ ಹೆಜ್ಜೆಗುರುತುಗಳನ್ನು ಅಕ್ಷರದ ರೂಪದಲ್ಲಿ ಸೆರೆಹಿಡಿಯುತ್ತದೆ. ಹಾಗೆಯೇ ಶತ್ರುಗಳ ಧಾಳಿಗೆ ತುತ್ತಾದ ಹಂಪೆಯ ಅಪೂರ್ವ ಕಲಾಶಿಲ್ಪಗಳು, ವಿಜಯನಗರ ಸಾಮ್ರಾಜ್ಯದ ನೆಲೆಗಳ ನಾಶದ ಕುರಿತ ನಿರಾಶೆಯ ಎಳೆಗಳು ಇಲ್ಲಿ ಮೂಡಿಬರುತ್ತವೆ. ಇತಿಹಾಸದಲ್ಲಿ ವಜ್ರವೈಢೂರ್ಯಗಳನ್ನು ಮಾರುಕಟ್ಟೆಗಳಲ್ಲಿ ಮಾರುತ್ತಿದ್ದ ಸಂಪದ್ಭರಿತ ಸಾಮ್ರಾಜ್ಯ ವಿಜಯನಗರದ ಚರಿತ್ರೆಯು ಈ ಕವಿತೆಯಲ್ಲಿ ಹಾಸುಹೊಕ್ಕಾಗಿದೆ. ಹನ್ನೆರಡನೆಯ ಶತಮಾನದಲ್ಲಿದ್ದ ಶರಣರ ಸಾಮಾಜಿಕ ಸಮಾನತೆಯ ಆಶಯ ಪುನಃ ನೆಲೆನಿಂತದ್ದು ವಿಜಯನಗರದ ಸಾಮ್ರಾಜ್ಯದಲ್ಲಾಗಿದೆ. ಎಲ್ಲಾ ಧರ್ಮಗಳಿಗೂ ಏಕಸಮಾನವಾದ ಮಾನ್ಯತೆಯನ್ನು ನೀಡಿದ ಇಲ್ಲಿನ ರಾಜರು ಶರಣರಿಗೆ, ಜಂಗಮರಿಗೆ ಅದ್ವಿತೀಯವಾದ ಸ್ಥಾನಮಾನಗಳನ್ನು ನೀಡಿದ್ದರು. ಇಂತಹ ನಾಡಿನಲ್ಲಿ

**ಅರಬ್ಬಿ ಕುದುರೆಗಳ ರಾಜಗಮನ**

**ಗೆದ್ದ ಕೈಗಳ ಹಾರೆಯೇಟಿಗೆ**

**ಕಡಲೆ ಗಣಪತಿ ಕಡಲೆ**

**ಉಗ್ರ ನರಸಿಂಹ ಕಲ್ಲಿನ ಮೂಗು**

**ನುಚ್ಚುನೂರು**

**"ಹರಹರ ಮಹದೇವ"**

**ಸ್ಥಾವರಕ್ಕಳಿವುಂಟು**

**ಜಂಗಮರು ನಾವು**

**ಜಗದೊಳು ಜಂಗಮರು ನಾವು**

**ಕಲ್ಯಾಣದಲ್ಲಿ ರಕ್ತದ ವಾಸನೆಗೆ**

**ಕಾಲು ಕಿತ್ತೋಡಿದವರು**

**ಉಳವಿಯಲ್ಲಿ ಮತ್ತೆ ಮಹಾಮನೆಯ**

**ಸ್ವಪ್ನ ಕಂಡವರು**

ಇಲ್ಲಿ ಶಿವಪ್ರಕಾಶರು ಹಂಪೆಯ ಕರ್ಮಗಾಥೆಯನ್ನು ಕಣ್ಣುಕಟ್ಟುವಂತೆ ನಿರೂಪಿಸುತ್ತಿದ್ದಾರೆ. ಅರಬ್ಬಿ ಕುದುರೆಗಳ ರಾಜಗಮನ, ಗೆದ್ದ ಕೈಗಳಿಂದಾದ ಅಲ್ಲಿದ್ದ ಎಷ್ಟೋ ದೇವತಾವಿಗ್ರಹಗಳ ನಾಶ, ಕಡಲೆಕಾಳು, ಸಾಸಿವೆ ಕಾಳು ಗಣಪತಿ, ಉಗ್ರನರಸಿಂಹ ಮೂರ್ತಿಗಳ ಭಗ್ನ ಹೀಗೆ ಇತಿಹಾಸದ ಒಂದು ತುದಿಯಲ್ಲಿ ವಿಜೃಂಭಣೆಯಿಂದ ಬದುಕಿದ ಸಾಮ್ರಾಜ್ಯವನ್ನು ಶತ್ರುಗಳ ಧಾಳಿ ಜರ್ಝರಿತಗೊಳಿಸಿಬಿಟ್ಟವು. ಸಾಮಾಜಿಕ ಒಳಿತಿಗೆ ಕಲ್ಯಾಣದಲ್ಲಿ ಒಂದಾಗಿದ್ದ ಜಂಗಮರು ಅಲ್ಲಿನ ರಕ್ತವನ್ನು ಕಂಡು ಓಡಿಹೋಗಿದ್ದರು. ಉಳವಿಯಲ್ಲಿದ್ದುಕೊಂಡು ಪುನಃ ಮಹಾಮನೆಯನ್ನು ಕಟ್ಟುವ ಕನಸನ್ನು ಕಂಡವರು ಇವರಾಗಿದ್ದರು. ಆದರೆ –

**ರಾಜಾಸ್ಥಾನ, ವಿರೂಪಾಕ್ಷ ದೇವಸ್ಥಾನ**

**ಕೂತು ಉಣ್ಣುವ ಊಟ**

**ಮುತ್ತು ರತ್ನದ ರಾಶೀ**

**ವಿಜಯ ಪತಾಕೆ**

**ನದಿಯ ತಟಾಕಗಳನ್ನು**

**ಬಿಟ್ಟು ಹೊರಟಿದ್ದೇವೆ.**

**ಸ್ಥಾವರಕ್ಕಳಿವುಂಟು**

ಈಗ ವಿಜಯನಗರದ ರಾಜಾಸ್ಥಾನವನ್ನು, ವಿರೂಪಾಕ್ಷ ದೇವಾಲಯವನ್ನು, ಸಕಲ ಸಂಪದ್ಭರಿತವಾದ ಪ್ರದೇಶವನ್ನೆಲ್ಲಾ ತರೆದು ಈಗ ಪುನಃ ಹೊರಟುನಿಂತಿದ್ದಾರೆ. ಏಕೆಂದರೆ ಇವರು ಜಂಗಮರು, ಇವರು ನಡೆದದ್ದೇ ದಾರಿ ಎನ್ನುವಂತೆ ಬಯಲು ಬಯಲನೆ ಬಿತ್ತಿ ಬಯಲನೆ ಬೆಳೆದು ಸಾಮಾಜಿಕ ಸಮಾನತೆಯನ್ನು ಕರುಣಿಸುವ ಮಹಾನುಭಾವರಾಗಿ ಹೊರಟಿದ್ದಾರೆ. ಇಲ್ಲಿ ಶಿವಪ್ರಕಾಶರು ಜಂಗಮರನ್ನು ಕಾವ್ಯದ ಕೇಂದ್ರವನ್ನಾಗಿರಿಸಿಕೊಂಡು ಕಾವ್ಯವನ್ನು ರಚಿಸಿದ್ದರೂ, ಆ ಕಾವ್ಯದ ಅಂತರಾಳದ ಒಳಹೊಕ್ಕು ನೋಡಿದರೆ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟಿದ್ದ ಸಾಮ್ರಾಜ್ಯವೊಂದರ ಚಾರಿತ್ರಿಕ ಅವನತಿಯ ಕುರಿತ ನೋಟವೊಂದನ್ನು ಒದಗಿಸುತ್ತದೆ.

ವಿಜಯನಗರದ ಕೊನೆಯ ದೊರೆ ರಾಮರಾಯನ ಎದೆಗೆ ಬಿದ್ದ ಚೂರಿ ಕೇವಲ ಅವನ ಅಂತ್ಯಕ್ಕೆ ಮಾತ್ರವಲ್ಲದೆ ಕನ್ನಡಿಗರ ಇತಿಹಾಸದ ಅದ್ಭುತ ಪುಟದ ಅಂತ್ಯಕ್ಕೆ ಕಾರಣವಾಯಿತು. ವಿಜಯನಗರದ ಮೇಲಾದ ಧಾಳಿ ರಾಶಿಗಟ್ಟಲೇ ಹೆಣಗಳನ್ನು ಬೀಳಿಸಿದವು, ಅಲ್ಲಿನ ಜನರ ರಕ್ತ ಕಾಲುವೆಯಾಗಿ ಹರಿದಿತ್ತು, ರಸ್ತೆಯ ತುಂಬೆಲ್ಲಾ ತಮ್ಮವರನ್ನು ಕಳೆದುಕೊಂಡವರ ನೋವು ಹಂಪೆಯ ವೈಭವವನ್ನೇ ಕಳೆಗುಂದುವಂತೆ ಮಾಡಿಬಿಟ್ಟಿತು ಎನ್ನುವ ದುಃಖದ ನುಡಿಗಳು ಕಾವ್ಯದ ಜೀವಾಳವಾಗಿರುವುದನ್ನು ನಾವಿಲ್ಲಿ ಗಮನಿಸಬೇಕಾಗುತ್ತದೆ.

ಎಚ್.ಎಸ್.ಪ್ರಕಾಶರು ಚರಿತ್ರೆಯ ಪುಟಗಳಲ್ಲಿ ಆಗಿರುವ ಹಲವು ಚಾರಿತ್ರಿಕ ಅಂಶಗಳನ್ನು ತಮ್ಮ ಕಾವ್ಯಕ್ಕೆ ವಸ್ತುವನ್ನಾಗಿಸಿಕೊಂಡಿದ್ದಾರೆ. ಅವುಗಳಲ್ಲಿ 'ಅಣುಕ್ಷಣ ಚರಿತೆ' ಕವನ ಸಂಕಲನದ 'ಅಭಿನವ' ಕವಿತೆಯನ್ನು ನೋಡುವುದಾದರೆ ಇಲ್ಲಿ ಅಭಿನವ ಎನ್ನುವ ವ್ಯಕ್ತಿ ಚಾರಿತ್ರಿಕ ವ್ಯಕ್ತಿಯಾಗಿರದೆ, ಅವನು ಎಲ್ಲರ ಹೃದಯಾಂತರಾಳದಲ್ಲಿ ನೆಲೆಸುವ ವ್ಯಕ್ತಿಯಾಗಿ ಚಿತ್ರಿತವಾಗಿದ್ದಾನೆ. 'ಅಭಿನವ'ರಂತಹ ವ್ಯಕ್ತಿಗಳಾಗಿ ಉಳಿಯಬೇಕೆನ್ನುವ ಆಶಯವನ್ನು ಶಿವಪ್ರಕಾಶರು ಈ ಕವಿತೆಯ ಮೂಲಕ ವ್ಯಕ್ತಪಡಿಸುತ್ತಾರೆ. ಈ ಕವಿತೆಯಲ್ಲಿ ಕಾಶ್ಮೀರದ ಇತಿಹಾಸವನ್ನು ಬರೆಯಲು ಹೊರಟ ಕಲ್ಹಣನ ಕೃತಿ 'ರಾಜತರಂಗಿಣಿ'ಯನ್ನು ಕೇಂದ್ರವನ್ನಾಗಿರಿಸಿಕೊಳ್ಳುತ್ತದೆ. ಕಲ್ಹಣ ಬರೆಯುವುದು –

**ಕಲ್ಹಣ ಬರೆದಿದ್ದಾನೆ ರಾಜತರಂಗಿಣಿಯಲ್ಲಿ**

**ಕಾಶ್ಮೀರ ಕೇಸರಿಯ ಕುಸುಮಗಳ ಬೈಗ**

**ಪದ್ಮಾರಾಗದ ಆಧರದ ಸುಭಗೆಯರ ಬಗ್ಗೆ**

**ಮುಗುಲುಗಲ ನಿಲೆ ಹಾಕಿ ನಿಂತ ನಿಂತ ಗಿರಿಶಿಖರಗಳ ಬಗ್ಗೆ**

**ವಿದ್ವದ್ಗೋಷ್ಠಿ ವಿಲಾಸ ಕೂಟಗಳ ಬಗ್ಗೆ**

**ಕೇಶರಾಜನ ಆಸ್ಥಾನದಲ್ಲೊಬ್ಬ ಮಾರ್ಜಾಲ ವರ್ತಕ**

**ತಾನೇ ಗುರುವೆಂದು ತಾನೇ ಹರನೆಂದು**

**ದೊರೆಗೆ ತಿನ್ನಿಸಿ ಚಳ್ಳೇಹಣ್ಣು**

**ವರ್ಣಕಾರ ಮತ್ತಿತರ ಕುಶಲಕರ್ಮಿಗಳ ಪರಿಷತ್ತಿಗೆ**

**ಒಡೆಯನದುದರ ಬಗ್ಗೆ**

ಕಂಪಕನೆನ್ನುವ ರಾಜಕಾರಣಿಯ ಮಗನಾಗಿದ್ದ ಕಲ್ಹಣನು ಇತಿಹಾಸ ರಚನೆಗೆ ಅಗತ್ಯವಾದ ಎಲ್ಲಾ ಶಿಕ್ಷಣವನ್ನು ಪಡೆದುಕೊಂಡು 'ರಾಜತರಂಗಿಣಿ'ಯಂತಹ ಐತಿಹಾಸಿಕ ಕಾವ್ಯವನ್ನು ಬರೆಯಲು ಮುಂದಾಗುತ್ತಾನೆ. ಇವನ ಇದ್ದೇಶ ಕಾಶ್ಮೀರದ ಸಮಗ್ರ ಇತಿಹಾಸವನ್ನು ರಚಿಸುವುದೇ ಆಗಿತ್ತು. ಅದಕ್ಕಾಗಿ ಕಲ್ಹಣ ತನ್ನ ಕುರಿತಯಲ್ಲಿ ಗೋನಂದ, ಕರ್ಕೋಟ, ಉತ್ಸಲ, ಲೋಹರ ಮೊದಲಾದ ಅನೇಕ ರಾಜಮನೆತನಗಳ ಕುರಿತ ವಿವರಗಳನ್ನು ನೀಡಿದ್ದಾನೆ. ಇಲ್ಲಿ ಕಲ್ಹಣ ಕೇವಲ ರಾಜಮನೆತನಗಳ ಪಟ್ಟಿಯನ್ನಷ್ಟೇ ನೀಡುವ ಕೃತಿಯಲ್ಲ. ಬದಲಿಗೆ ಇದೊಂದು ಸಾಮಾಜಿಕ, ಆರ್ಥಿಕ, ರಾಜಕೀಯ ಅಂಶಗಳನ್ನು ಸೆರೆಹಿಡಿಯುವ ಇತಿಹಾಸದ ಆಕರಗ್ರಂಥವಾಗಿದೆ. ಕಲ್ಹಣನ ಜೀವಿತಾವಧಿಯಲ್ಲಿ ಕಂಡ ರಾಜರು ಮಾತ್ರವಲ್ಲದೇ ನೀಚರೂ, ದೂರ್ತರ ಚಿತ್ರಣಗಳು, ಪ್ರಜೆಗಳ ಹಿತಕ್ಕಾಗಿ ಕೆರೆ, ಬಾವಿ ಕಟ್ಟೆಗಳನ್ನು ನಿರ್ಮಿಸಿದ ದಾನಿಗಳ ಚಿತ್ರಣವನ್ನು ನೀಡಿದ್ದಾನೆ. ಕಾವ್ಯದ ಮೂಲಕವೇ ಇತಿಹಾಸವೊಂದರ ಚಿತ್ರಣವೊಂದನ್ನು ನೀಡಹೊರಟ ಕಲ್ಹಣನ ಪ್ರಯತ್ನ ಶ್ಲಾಘನೀಯವಾದುದು. ಹಾಗೆಯೇ ಕಲ್ಹಣ ಬದುಕಿರುವಾಗಲೇ ಬದಲಾದ ಕಾಶ್ಮೀರದ ಇತಿಹಾಸ ಅತ್ಯಂತ ಗಂಭಿರ ಪರಿಸ್ಥಿತಿಗಳನ್ನು ಕಂಡಿದೆ. ಸೈನಿಕರು, ಅಧಿಕಾರಿಗಳಲ್ಲಿ ಶಿಸ್ತು ಮಾಯವಾಗಿ, ಸ್ವಾರ್ಥ, ಲೋಭಗಳು ಮನೆ ಮಾಡಿದ್ದವು. ಒಂದು ರಾಜ್ಯವನ್ನು ಸುಭೀಕ್ಷವಾಗಿಡಬೇಕಾಗಿದ್ದ ಮಂತ್ರಿಗಳು, ಸೈನ್ಯಾಧಿಕಾರಿಗಳೇ ಪ್ರಜೆಗಳನ್ನು ಸುಲಿಗೆ ಮಾಡಲು ನಿಲ್ಲುತ್ತಾರೆ. ಹೀಗೆ ಕಲ್ಹಣ ತನ್ನ ಕಾವ್ಯವನ್ನು ಕಾವ್ಯ ಚೌಕಟ್ಟನ್ನು ಮೀರಿ ಬರೆಯಹೊರಟಾಗ ಇತಿಹಾಸದ ಧಾರುಣತೆಯೂ ಸಹ ತನ್ನ ಚಹರೆಯನ್ನು ತೆರೆದುಕೊಳ್ಳುವಂತೆ ಮಾಡುತ್ತಾನೆ. ಚರಿತ್ರೆಯು ಉಳ್ಳವರನ್ನು ಹೆಸರಿಸುವಂತೆ, ನೆನಪಿಟ್ಟುಕೊಳ್ಳುವಂತೆ ಸಾಮಾನ್ಯ ವರ್ಗದವರನ್ನು ಗುರುತಿಸುವುದಿಲ್ಲ. ಕಲ್ಹಣನ ರಾಜತರಂಗಿಣಿ ಕಾಶ್ಮೀರದ ರಾಜಮನೆತನಗಳು, ರಾಜಕೀಯ ಇತಿಹಾಸವನ್ನು ಚಿತ್ರಿಸಿದಂತೆ ಸಾಮಾನ್ಯ ವರ್ಗದ ಇರುವಿಕೆಯನ್ನು ಚಿತ್ರಿಸುವುದಿಲ್ಲ. ಇದು ರಾಜತರಂಗಿಣಿಯ ಒಂದು ಕೃತಿಯದಷ್ಟೇ ಅಲ್ಲ. ನಮ್ಮ ಚಾರಿತ್ರಿಕ ಕೃತಿಗಳು ಸಹ ಉಳ್ಳವರ, ಶಕ್ತಿಶಾಲಿಗಳ ಯುದ್ಧ, ಹೋರಾಟದ ಅಂಶಗಳಿಗೆ ನೀಡಿರುವ ಮನ್ನಣೆಯನ್ನು ಜನಸಾಮಾನ್ಯರ ಆಶೋತ್ತರಗಳಿಗೆ ನೀಡಿಲ್ಲ. ಕಾಶ್ಮೀರದ ಆಸ್ಥಾನದ ಮಾರ್ಜಾಲನೆನ್ನುವ ವರ್ತಕ ವಂಚನೆಯನ್ನು ಗುರುತಿಸುವ ಕಲ್ಹಣನ ಕೃತಿ ಸಾಮಾನ್ಯವರ್ಗದ ವೀರರನ್ನು ಕುರಿತು ಮಾತನಾಡದೇ ಹೋಗಿದೆ. ದೇಶವನ್ನು ಆಳಿದ ರಾಜರುಗಳಷ್ಟೇ ಈ ದೇಶದ, ಸಾಮ್ರಾಜ್ಯದ ಸ್ವತ್ತಲ್ಲ. ಆ ದೇಶದ ಪ್ರತಿಯೊಬ್ಬ ವೀರನು ಸಹ ಒಂದು ಚರಿತ್ರೆಯಾಗಬೇಕು. ಶ್ರಮಿಕರು ಚರಿತ್ರೆಯಲ್ಲಿ ಉಲ್ಲೇಖಾರ್ಹವಾಗಬೇಕಾಗಿತ್ತು ಎನ್ನುವ ಆಶಯವೊಂದನ್ನು ಎಚ್.ಎಸ್.ಶಿವಪ್ರಕಾಶರು ಇಲ್ಲಿ ವ್ಯಕ್ತಪಡಿಸುತ್ತಾರೆ.

ಬುದ್ಧನು ಐತಿಹಾಸಿಕ ಪುರುಷನಾಗಿದ್ದರೂ ಆಧ್ಯಾತ್ಮಿಕ ವಿಚಾರಗಳಿಗೆ, ಅಹಿಂಸೆಯ ಸಿದ್ಧಾಂತಗಳಿಗೆ ಜನಪ್ರಿಯನಾಗಿರುವವನಾಗಿದ್ದಾನೆ. ಬುದ್ಧನನ್ನು ಕುರಿತು ಅನೇಕ ವಿವಿಧ ನೆಲೆಗಳಲ್ಲಿ ಕವಿತೆಗಳನ್ನು ರಚಿಸಿದ್ದಾರೆ. ಹಾಗೆಯೇ ಅವನ ಸಮಕಾಲೀನರ ಕುರಿತ ಕವಿತೆಗಳನ್ನೂ ಸಹ ರಚಿಸಿದ್ದಾರೆ. ಅಂತಹ ಕವಿತೆಯ ಸಾಲಿನಲ್ಲಿ ಎಚ್.ಎಸ್.ಶಿವಪ್ರಕಾಶ್ ಅವರು 'ವಾಸವದತ್ತೆ' ಮತ್ತು 'ಅಮ್ರಪಾಲಿ' ಕವಿತೆಗಳೂ ಸಹ ನಿಲ್ಲುತ್ತವೆ. ವಾಸವದತ್ತೆ ಬುದ್ಧನ ಸಮಕಾಲೀನಳಾಗಿದ್ದವಳು ಮೇಲಾಗಿ ಇವಳು ಪ್ರಸಿದ್ದವಾದ ವಾರಾಂಗನೆಯಾಗಿದ್ದವಳು. ಅದೇ ಸಮಯದಲ್ಲಿ ತಾನು ಬಯಸಿದ್ದನ್ನು ಬಿಡದೆ ಸಂಪಾದಿಸುವ ಹಠವಾದಿಯಾಗಿದ್ದವಳು.

**ವಾಸವದತ್ತೆ ಬುದ್ಧ ಸಮಕಾಲೀನಳು**
**ಅವಳೊಬ್ಬ ಪ್ರಸಿದ್ಧ ವಾರಾಂಗನೆ**
**ಅವಳ ಮನಸ್ಸಿನಲ್ಲಿ**
**ಒಂದು,**
**ನನ್ನ ಪ್ರಾಣದ ಅದಿರನಗೆದಗೆದು**
**ಕಣ್ಣುಗಳನ್ನು ಬೆಳಕಿನೊಡನೆ ಮಾಡಿದೆ ಕೋಸಲದ ಅರಸುಕುವರಾ ನೀನು**

ಇಲ್ಲಿ ವಾಸವದತ್ತೆ ಬುದ್ಧನ ಶಿಷ್ಯನಾದ ಉಪಗುಪ್ತ ಎನ್ನುವ ಭಿಕ್ಷುವಿನ್ನಲಿ ಅನುರಕ್ತಗಳಾಗುತ್ತಾಳೆ. ಆದರೆ ಉಪದತ್ತ ಅವಳ ಪ್ರೇಮವನ್ನು ಸ್ವೀಕರಿಸುವುದಿಲ್ಲ. ಕೋಸಲ ದೇಶದ ಅರಸನಾಗಿದ್ದ ಗೌತಮ ಬುದ್ಧ ವಾಸವದತ್ತೆಯಲ್ಲಿನ ಬೇಗುದಿಗಳನ್ನು ದೂರಗೊಳಿಸಿ ಅವಳಿಗೆ ನೆಮ್ಮದಿಯ ಬದುಕನ್ನು ತಂದುಕೊಡುವಲ್ಲಿ ಯಶಸ್ವಿಯಾಗುತ್ತಾನೆ. ಮಾಯಾಲೋಕದಲ್ಲಿ ಅಳೆಯುತ್ತಿದ್ದ ವಾಸವದತ್ತೆಯನ್ನು ವಾಸ್ತವದ ನೆಲೆಗೆ ತಂದು ನಿಲ್ಲಿಸಿದನು. ಕೊನೆಗೆ ವಾಸವದತ್ತೆ ಬುದ್ಧ ಉಪದೇಶದಿಂದ ಪ್ರಬುದ್ಧೆಯಾಗಿ ಕೋಪ ತಾಪಗಳಿಗೆ ಕಿವಿಗೊಡದೆ, ಮಣ್ಣು ಹೊನ್ನಿಗೆ ಪ್ರಾಶಸ್ತ್ಯವನ್ನು ನೀಡದೆ ಬದುಕುವ ಪರಿಯನ್ನು ಕಂಡುಕೊಳ್ಳುತ್ತಾಳೆ. ಇದು ಒಂದು ಬಗೆಯಲ್ಲಿ ಕಾಲ್ಪನಿಕ ಎಂದೆನಿಸಿದರೂ ಬುದ್ಧ, ವಾಸವದತ್ತೆಯರು ಚಾರಿತ್ರಿಕ ವ್ಯಕ್ತಿಗಳು ಎನ್ನುವುದನ್ನು ಮರೆಯುವಂತಿಲ್ಲ. ಬುದ್ಧ ಉಪದೇಶಕ್ಕೆ ಮನಸೋತ ಹಲವರಲ್ಲಿ ವಾಸವದತ್ತೆಯೂ ಒಬ್ಬಳಾಗಿದ್ದಳು ಎನ್ನುವ ಸಂಗತಿ ಸತ್ಯಕ್ಕೆ ಹೊರತಾದುದಲ್ಲ.

ಬುದ್ಧನಿಗೆ ಸಮಕಾಲೀನರಾದ ಹಲವು ವ್ಯಕ್ತಿಗಳಲ್ಲಿ ಮತ್ತೊಬ್ಬಳು ಅಮ್ರಪಾಲಿ. ಇವಳು ಬುದ್ಧನ ಕಾಲದ ಪ್ರಸಿದ್ಧ ವೇಶ್ಯೆ. ಅಪೂರ್ವ ಸುಂದರಿಯಾಗಿದ್ದ ಇವಳ ಸ್ನೇಹವನ್ನು ಬಯಸಿ ಅನೇಕ ಶ್ರೀಮಂತರು ಇವಳ ಮನೆಯ ಬಾಗಿಲಿನಲ್ಲಿ ಗುಂಪು ಗುಂಪಾಗಿ ಕಾಯುತ್ತಿದ್ದರು. ಅಪಾರವಾದ ಐಶ್ವರ್ಯಕ್ಕೆ ಒಡತಿಯಾಯಾದ ಅಮ್ರಪಾಲಿ ಬುದ್ಧನ ಅಧ್ಯಾತ್ಮಿಕ ಪ್ರಭಾವಕ್ಕೆ ಒಳಗಾದಳು. ತಮ್ಮ ಪೂರ್ವಜೀವನವನ್ನು ತ್ಯಜಿಸಿ ಬುದ್ಧನ ಅನುಯಾಯಿಯಾದಳು.

**ಎಲ್ಲ ಅರಸರೂ ನಿನ್ನೆದುರು ತಿರುಕರು**

**ಎಲ್ಲ ಶುರರೂ ನಿನ್ನೊಳಗೆ ಸೆರೆಯಾಳುಗಳು**

**ಎಲ್ಲ ಸಂಪತ್ತೂ ಈಗಿಲ್ಲಿ ಕಿಂಚಿತ್ತು**

**ಎಲ್ಲ ಗುಂಡಿಗೆ ಕಣ್ಣ ಕೈಯಿ**

**ಖಾಲಿ ತಿರುಪೆ ಪಾತ್ರೆ**

**ಅಂಬಪಾಲಿ ನಿನಗಾಗಿ**

**ನಿನ್ನ ಪ್ರೀತಿಗಾಗಿ**

ಎನ್ನುತ್ತಾ ವೈಶಾಲಕ್ಕೆ ಬಂದ ಅಮ್ರಪಾಲಿಯ ಸೌಂದರ್ಯಕ್ಕೆ ಮಾರುಹೋಗದ ಆಳರಸರೇ ಇರಲಿಲ್ಲವೆನ್ನಬಹುದು. ಅವಳ ಪ್ರೀತಿಗಾಗಿ ಇವರೆಲ್ಲರು ಹಗಲಿರುಳು ಪರಿತಪಿಸುತ್ತಿದ್ದರು. ಆದರೆ ಅಮ್ರಪಾಲಿ ಮಾತ್ರ ಮಾರುಹೋದದ್ದು ಬುದ್ಧನ ಪರಿಶುದ್ಧ ಮನಸ್ಸಿಗೆ, ಅವನ ನಿರ್ಮಲವಾದ ತತ್ವಕ್ಕಾಗಿದೆ.

**ಮೂಡಲೇ ಬೇಕು**

**ಮೂಡಣದ ನಭದಲ್ಲಿ**

**ಒಂದು ತಿರುಪೆ ಪಾತ್ರೆ**

**ಒಂದು ವಿಕಸಿತ ಕಮಲ**

**ಸೂರ್ಯವದನದ ಮೇಲೆ ಚಂದ್ರಹಾಸ**

**ಒಡ್ಡಲೇಬೇಕು ನಿನ್ನೆದುರು**

**ಬುದ್ಧ ಪ್ರಸಿದ್ಧ ತಿರುಕರೆಲ್ಲರ ಅರಸ**

**ಶೂನ್ಯ ಭಿಕ್ಷಾಪಾತ್ರೆಯನ್ನು**

ಅಮ್ರಪಾಲಿಯ ಮನೆಯ ಬಾಗಿಲಲ್ಲಿ ಕಾಯುತ್ತಿದ್ದ ಅರಸರುಗಳು ಅವಳ ಸೌಂದರ್ಯಕ್ಕಾಗಿ, ಪ್ರೀತಿಗಾಗಿ ಕಾಯುತ್ತಿದ್ದರು. ಆದರೆ ಬುದ್ಧನಿಗಾಗಿ ಸ್ವತಃ ಅಮ್ರಪಾಲಿಯೇ ಕಾಯುತ್ತಿದ್ದಳು. ಅವನ ಮಾತಿಗಾಗಿ, ಶಿಷ್ಯತ್ವಕ್ಕಾಗಿ. ಬುದ್ಧನೇ ಇವಳ ಮನೆಯ ಬಾಗಿಲಿಗೆ ಬಂದು ಭಿಕ್ಷೆಯನ್ನು ಸ್ವೀಕರಿಸಿದ್ದು ಒಂದು ಇತಿಹಾಸ. ಅಂದು ಅಮ್ರಪಾಲಿ ತನ್ನಲ್ಲಿದ್ದ ಎಲ್ಲಾ ಆಸ್ತಿಗಳನ್ನು ಬುದ್ಧನಿಗೆ, ಬುದ್ಧನ ಸಂಘದ ಉಪಯೋಗಕ್ಕಾಗಿ ದಾನ ಮಾಡಿದಳು. ಅವಳ ತ್ಯಾಗಕ್ಕಾಗಿ ಬುದ್ಧನೇ ಅವಳೆದುರು ಬಂದನು ಎನ್ನುವ ಅಂಶವನ್ನು ಎಚ್.ಎಸ್.ಶಿವಪ್ರಕಾಶರವರು ಬಹು ಸುಂದರವಾಗಿ ಸೆರೆಹಿಡಿಯುತ್ತಾರೆ.

'ರಿಕ್ಯೂನ ಕೊನೆಯ ಟೀ ಸಮಾರಂಭ' ಕವಿತೆಯು ಕೂಡ ಜಪಾನಿನ ಇತಿಹಾಸದ ಪುಟಗಳಲ್ಲಿ ಹಾಸುಹೊಕ್ಕಾಗಿರುವ ಝೆನ್ ಗುರು ರಿಕ್ಯೂವಿನ ವೃತ್ತಾಂತವನ್ನು ಒಳಗೊಂಡಿದೆ. ರಿಕ್ಯೂ ಜಪಾನಿಯ ಝೆನ್ ಗುರು. ಟೀ ಸಮಾರಂಭದ ಪ್ರವೀಣ. ಹಿದಯೋಷಿ ಚಕ್ರವರ್ತಿ ರಿಕ್ಯೂನ ರಾಜಕೀಯ ಗೊಂದಲಗಳಲ್ಲಿ ತನ್ನ ಗುರು ತನ್ನ ವಿರುದ್ಧ ಪಿತೂರಿ ನಡೆಸುತ್ತಿರುವನೆಂಬ ಶಂಕೆ ಮೂಡಿ ಹಿದಯೋಷಿ ರಿಕ್ಯೂಗೆ ಗೌರವಾರ್ಹ ಮರಣ ದಂಡನೆಯ ವಿಧಿಸುತ್ತಾನೆ. ಅದರ ಪ್ರಕಾರ ರಿಕ್ಯೂ ಹರಾಕಿರಿ ಮಾಡಿಕೊಳ್ಳಬೇಕು. ಅದಕ್ಕೆ ಮೊದಲು ರಿಕ್ಯೂ ತನ್ನ ಆಪ್ತ ಗೆಳೆಯರೊಂದಿಗೆ ಟೀ ಸಮಾರಂಭವೊಂದನ್ನು ಆಚರಿಸುತ್ತಾನೆ.

**ಸಾಯಬೇಕು ರಿಕ್ಯೂ**
**ಇವತ್ತೇ**
**ತನ್ನ ಕೈಯಿಂದಲೇ**
**ಚಕ್ರವರ್ತಿಯ ಆಜ್ಞೆ**
**ಸುರಿದುಕೊಂಡು ಟೀಯನ್ನು**
**ಖಾಲಿ ಬಟ್ಟಲುಗಳೊಳಗೆ**
**ಸುರಿದುಕೊಳ್ಳುವ ಹಾಗೆ ತಮ್ಮ ಜಈವವನ್ನು**
**ಒಂದೊಂದು ಗುಟುಕು ಟೀಯಲ್ಲಿ**
**ಕೋಟಿ ಕೋಟಿ ಕಲ್ಪಗಳು**

DOI: 10.59176
http://www.kristujayantijournal.com/index.php/KJKSP

ರಿಕ್ಯೂ ಆ ಟೀ ಪಾರ್ಟಿಯಲ್ಲಿ ತನ್ನೆಲ್ಲ ವಸಂತಗಳನ್ನು ನೆನೆಯುತ್ತಿದ್ದಾನೆ. ಈಗ ಅವನ ವಸಂತ ಕೊನೆಯಾಗುವ ಸಂದರ್ಭ ಬಂದಿದಿದೆ. ಕುದಿಯುತ್ತಿರುವ ಟೀ ನೀರಿನಲ್ಲಿ ಅವನು ಟೀ ಎಲೆಗಳು ಬೀಳುವುದನ್ನು ನೋಡುತ್ತಿದ್ದಾನೆ. ಆ ಎಲೆಗಳು ಮಾಯವಾದಂತೆ ಮನುಷ್ಯರೂ ಸಹ ಇತರರ ಆಸೆಗಳಿಗೆ, ಲೋಭಕ್ಕೆ, ಸ್ವಾರ್ಥಕ್ಕೆ ಬಲಿಯಾಗುತ್ತಿದ್ದಾರೆ ಎನ್ನುವ ಭಾವನೆ ಮೂಡುತ್ತದೆ. ಅವನು ತನ್ನೆಲ್ಲಾ ಗೆಳೆಯರನ್ನು ನೆನೆಯುತ್ತಿದ್ದಾನೆ. ಅಲ್ಲಿರುವ ಸೈನಿಕರು ಟೀಯನ್ನು ತಮ್ಮ ತಮ್ಮ ಬಟ್ಟಲಿಗೆ ಸುರಿಯುವಂತೆ ತಮ್ಮ ಪ್ರಾಣಗಳನ್ನು ಸಹ ಮುಡಿಪಿಡುತ್ತಿದ್ದಾರೆ. ಅವರು ಕುಡಿಯುತ್ತಿರುವ ಒಂದೊಂದು ಗುಟುಕಿನಲ್ಲಿಯೂ ಅದೆಷ್ಟೋ ಪ್ರಾಣಗಳು ಲಯಗೊಂಡಿವೆ. ಒಬ್ಬೊಬ್ಬರು ಕತ್ತಿಯ ಹರಿತಕ್ಕೆ ಒಂದೊಂದು ಪ್ರಾಣವನ್ನು ತೆಗೆದಾಗಲೂ ಬಟ್ಟಲು ಖಾಲಿಯಾಗುತ್ತಲಿದೆ. ಪ್ರಾಣದಾಹ ಅಲ್ಲಿ ತೃಪ್ತಿಗೊಳ್ಳದೆ ಉಳಿಯುತ್ತದೆ. ಇಂದು ಇರಿಯುವವರೇ ಮುಂದೊಂದು ದಿನ ಇರಿಯುವವರ ಕತ್ತಿಗೆ ಕೊರಳೊಡ್ಡಬೇಕಾಗುತ್ತದೆ. ಇದನ್ನರಿತ ರಿಕ್ಯೂ ಟೀ ಕುಡಿಯುವುದನ್ನು ತಡೆಯಲು ಪ್ರಯತ್ನಿಸುತ್ತಾನೆ. ಆದರೆ ರಕ್ತಚರಿತ್ರೆಯ ಇತಿಹಾಸ ಇಲ್ಲಿಗೆ ನಿಲ್ಲುವುದಿಲ್ಲ.

**ಹೊಳೆಯುತ್ತಾ ಇದೆ ಇನನೂ**

**ಕತ್ತಿ ಮಿಂಚಿನ ಹಾಗೆ**

**ರಕ್ತ ಚೆರ್ರಿಯ ಹಾಗೆ**

**ಯುಗದ ಹಾಗೆ**

**ಇಲ್ಲಿ ಪ್ರತಿಯೊಂದೂ ಕ್ಷಣ**

ಇಲ್ಲಿ ಕತ್ತಿಯ ಭಾಷೆ ಅಂದರೆ ಯುದ್ಧದ ಭಾಷೆ ಮಿಂಚಿನಂತೆ ಬಂದು ಹೋಗಿಬಿಡುತ್ತದೆ. ಆದರೆ ಇತಿಹಾಸದಲ್ಲಿ ಅದು ಮೂಡಿಸುವ ರಕ್ತಚರಿತ್ರೆ ಪ್ರತಿಯೊಂದು ಕ್ಷಣವನ್ನು ಯುಗದಂತೆ ಮಾಡಿಬಿಡುತ್ತದೆ. ಯುದ್ಧ ಆ ಕ್ಷಣಕ್ಕೆ ವಿಕೃತ ಸುಖವನ್ನು ನೀಡಿದರೂ ಸಹ ಅದರಿಂದ ನೋವನ್ನುವ ಕೋಟ್ಯಂತರ ಹೃದಯಗಳ ನೆಮ್ಮದಿಯ ಪ್ರತಿ ಕ್ಷಣವನ್ನೂ ಕಸಿದುಕೊಂಡುಬಿಡುತ್ತದೆ. ಹಾಗಾಗಿ ಯುದ್ಧಕ್ಕಿಂತಲೂ ಶಾಂತಿ ಮುಖ್ಯವೆನ್ನುವ ಆಶಯವೊಂದನ್ನು ಈ ಕವಿತೆ ಅಭಿವ್ಯಕ್ತಿಸುತ್ತದೆ. ಹೀಗೆ ಎಚ್.ಎಸ್.ಶಿವಪ್ರಕಾಶ್ ಅವರು ತಮ್ಮ ಕಾವ್ಯಗಳಲ್ಲಿ ಇತಿಹಾಸದ ಸೂಕ್ಷ್ಮ ಸಂಗತಿಗಳನ್ನು ಸಹ ದೀರ್ಘವಾದ ಕವನವನ್ನಾಗಿಸುವಲ್ಲಿ ಯಶಸ್ವಿಯಾಗುತ್ತಾರೆ.

ಐತಿಹಾಸಿಕ ಪ್ರಜ್ಞೆಯೆನ್ನುವುದು ಭೂತಕಾಲವನ್ನು ಪ್ರತಿನಿಧಿಸಿದರು ಸಹ ವರ್ತಮಾನ ಮತ್ತು ಭವಿಷ್ಯದ ಏಕತೆಯಲ್ಲಿ ಸಂಯೋಜಿಸಲ್ಪಟ್ಟಿರುತ್ತದೆ. ಐತಿಹಾಸಿಕ ಪ್ರಜ್ಞೆ ಸಾಂಸ್ಕೃತಿಕ ಮೂಲಮಾದರಿಗಗಳ ಜೊತೆಜೊತೆಗೆ ಕಾಲ

DOI: 10.59176
http://www.kristujayantijournal.com/index.php/KJKSP

ಮತ್ತು ತಲೆಮಾರುಗಳನ್ನು ಜೋಡಿಸುವ ಸೇತುವೆಯಾಗಿರುತ್ತದೆ. ಇಲ್ಲಿ ಎಚ್.ಎಸ್.ಶಿವಪ್ರಕಾಶ್ ಅವರಲ್ಲಿ ಕಾಣುವ ಐತಿಹಾಸಿಕ ಪ್ರಜ್ಞೆಯು ವೈಯಕ್ತಿಕ ಐತಿಹಾಸಿಕ ಪ್ರಜ್ಞೆಯಾಗಿದೆ. ಇದು ಒಂದು ಕಡೆ ಹಿಂದಿನ ಜ್ಞಾನದೊಂದಿಗೆ ಪರಿಚತವಾಗಿರುವ ಫಲಿತಾಂಶವಾಗಿದ್ದರೆ, ಮತ್ತೊಂದು ಕಡೆ ಭೂತಕಾಲವನ್ನು ಅರ್ಥಮಾಡಿಕೊಳ್ಳುವುದು ಮತ್ತು ಅದರೊಂದಿಗೆ ಸೇರಿರುವ ಭಾವನೆಗಳನ್ನು ಅರ್ಥೈಸಿಕೊಳ್ಳುವುದಾಗಿದೆ. ಈ ಪ್ರಜ್ಞೆಯು ಸಾಮೂಹಿಕ ನೆಲೆಯಲ್ಲಿಯೂ, ಒಂದು ಘಟನೆಯ ರೂಪದಲ್ಲಿಯೂ ಮನೆಮಾಡಿರುತ್ತದೆ.

ಎಚ್.ಎಸ್.ಶಿವಪ್ರಕಾಶ್ ಅವರು ತಮ್ಮ ಕವಿತೆಗಳಲ್ಲಿ ಸಾಮೂಹಿಕ ನೆಲೆಗಳಲ್ಲಿ ಇತಿಹಾಸದಲ್ಲಾದ ಬದಲಾವಣೆಗಳನ್ನು ಹಾಗೂ ಯಾವುದಾದರೊಂದು ಐತಿಹಾಸಿಕ ಘಟನೆಗಳನ್ನು ತಮ್ಮ ಕವನದ ವಸ್ತುವನ್ನಾಗಿಸಿಕೊಂಡು ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನಬಹುದಾಗಿದೆ. ಟಿಬೆಟ್ಟಿನ ಮಹಾಯೋಗಿಗಳಲ್ಲಿ ಒಬ್ಬನೆನಿಸಿದ ಮಿಲರೇಪನ ವೃತ್ತಾಂತ, 'ಸಿಂಗಿರಾಜನ ಸಂಪಾದನೆ'ಯಲ್ಲಿನ ಮೂಡಿಬಂದಿರುವ ಸಿಂಗಿರಾಜನ ಕೊನೆಯ ದಿನಗಳ ಪರಿಕಲ್ಪನೆ, ನವಲಗುಂದದ ನಾಗಲಿಂಗಪ್ಪನ ವೃತ್ತಾಂತ ಹಾಗೂ ಸಮಗಾರ ಭೀಮವ್ವನ ಸಂಗತಿಗಳನ್ನು ನಿರೂಪಿಸುವ 'ಸಮಗಾರ ಭೀಮವ್ವ' ಕವಿತೆ, 'ನದಿಯ ನಾಡಿನಲ್ಲಿ' ಕವಿತೆ ಕಟ್ಟಿಕೊಡುವ ಗೋರಕ್ಷ ಪ್ರಸಂಗ, 'ನಾಗಾರ್ಜುನ' ಕವಿತೆಯಲ್ಲಿ ಮೂಡಿಬಂದಿರುವ ಎರಡನೆಯ ಶತಮಾನದ ಮಹಾಯಾನ ದಾರ್ಶನಿಕ ನಾಗಾರ್ಜುನನ ಚಿತ್ರಣ, ಹನ್ನೆರಡನೆಯ ಶತಮಾನದ ಸೂಫಿ ಕವಿಯಾಗಿದ್ದ 'ಶಂಸ್–ಇ–ತಬ್ರೀಜ್'ನ ಚಿತ್ರಣ ಮೊದಲಾದೆಡೆಗಳಲ್ಲಿ ಎಚ್.ಎಸ್.ಶಿವಪ್ರಕಾಶರು ತಮ್ಮೊಳಗಿನ ಐತಿಹಾಸಿಕ ಪ್ರಜ್ಞೆಯೊಂದನ್ನು ಒಡಮೂಡಿಸುತ್ತಾರೆ. ಒಬ್ಬ ಕವಿಯಾದವನಿಗಿರುವ ಐತಿಹಾಸಿಕ ವಿಚಾರಗಳ ಆಳವಾದ ಅಧ್ಯಯನ ಹೇಗೆ ಒಂದು ಸಣ್ಣ ಘಟನೆಯನ್ನು ಸಹ ಕಾವ್ಯವನ್ನಾಗಿಸುತ್ತದೆ ಎನ್ನುವುದನ್ನು ನಿರೂಪಿಸುತ್ತದೆ.

ಸಾಹಿತಿಯಾದವನಿಗೆ ಕೇವಲ ತನ್ನ ದೇಶದ ಐತಿಹಾಸಿಕ ಘಟನೆಗಳ ವಿಚಾರಗಳಷ್ಟೇ ಅಲ್ಲದೇ ಪ್ರಪಂಚದ ಇತಿಹಾಸದ ಪರಿಕಲ್ಪನೆಯಿದ್ದರೆ ಅವು ಸಾಹಿತಿಯ ಬರವಣಿಗೆಯನ್ನು ಎಷ್ಟು ಗಟ್ಟಿಗೊಳಿಸಬಹುದು ಎನ್ನುವುದಕ್ಕೂ ಸಹ ಎಚ್.ಎಸ್.ಶಿವಪ್ರಕಾಶರ ಕವಿತೆಗಳು ಉದಾಹರಣೆಯಾಗುತ್ತದೆ. ಇಲ್ಲಿ ಶಿವಪ್ರಕಾಶರು ತಮ್ಮ ಅಧ್ಯಯನಶೀಲತೆಯಿಂದ ಕಂಡುಕೊಂಡು ಐತಿಹಾಸಿಕ ವಿಚಾರಗಳನ್ನು ಇಂದಿನ ವರ್ತಮಾನದ ಪರಿಸ್ಥಿತಿಗೆ ಅನುಗುಣವಾಗಿ, ಭವಿಷ್ಯದ ಸಮಸ್ಯೆಗಳಿಗೆ ಪರಿಹಾರಾತ್ಮಕ ರೂಪದಲ್ಲಿ ಬಳಸಿಕೊಂಡಿರುವ ಬಗೆ ಅದ್ವೀತಿಯವಾದುದು ಎನ್ನಬಹುದಾಗಿದೆ.

*******************

**ಪರಾಮರ್ಶನ**


೧. ಕವಿತೆ : ಇಂದಿನ ತನಕ – ಎಚ್.ಎಸ್.ಶಿವಪ್ರಕಾಶ್, ೨೦೧೧, ವಿಸ್ಮಯ ಪ್ರಕಾಶನ, ಮೈಸೂರು.

೨. ಶಿವಪ್ರಕಾಶರ ಕವಿತೆಗಳು – ಎಚ್.ಎಸ್.ಶಿವಪ್ರಕಾಶ್, ೨೦೦೦, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೩. ಎಚ್.ಎಸ್.ಶಿವಪ್ರಕಾಶ ಅವರ ಸಾಹಿತ್ಯದ ಸಾಂಸ್ಕೃತಿಕ ನೆಲೆ, ಶರಣಪ್ಪ ಬಸವಂತ್, ೨೦೨೧, ಗುಲ್ಬರ್ಗಾ ವಿಶ್ವವಿದ್ಯಾನಿಲಯ. ಗುಲ್ಬರ್ಗಾ.

೪. ಅನಿಕೇತನ ಸಂಚಿಕೆ ೧೧೬, ಬಿ.ವಿ.ವಸಂತಕುಮಾರ್, ೨೦೨೦ ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.